

**ಆಂಬುಲೆನ್ಸ್‌ನ ಚಾಲಕ ಸ್ಥಾನದಿಂದ ಪತಿ ನಿರ್ಗಮಿಸಿದಾಗ ಆ ಜಾಗವನ್ನು ತುಂಬುವುದು ರಾಧಿಕಾ ಅವರಿಗೆ ಅನಿವಾರ್ಯವಾಯಿತು. ರೋಗಿಗಳನ್ನು ಆಸ್ಪತ್ರೆಗೆ ಸಾಗಿಸುವ ಅವರ ನಿರ್ಧಾರ, ತಮ್ಮನ್ನು ತಾವು ಸ್ವಾವಲಂಬನೆಯ ಬದುಕಿಗೆ ತಲುಪಿಸಿಕೊಳ್ಳುವ ಪ್ರಯತ್ನವೂ ಆಗಿತ್ತು.**

ರಾಧಿಕಾ ಹಾಸನದಲ್ಲಿ ಹುಟ್ಟಿಬೆಳೆದವರು. ಕೊಡಗಿನ ಸುರೇಶ್ ಅವರನ್ನು ಮದುವೆಯಾಗಿ ಮಂಗಳೂರಿಗೆ ಬಂದಾಗ ಕನಸುಕಣ್ಣಿನ ಹುಡುಗಿ. ಅವರದ್ದು ಪ್ರೇಮ ವಿವಾಹ. ಹೊಸ ಸಂಸಾರ ಆರಂಭಿಸುವ ಉತ್ಸಾಹದಲ್ಲಿ ದಂಪತಿ ದುಡಿಮೆಯ ಹಾದಿ ಹಿಡಿದಿದ್ದರು. ಸುರೇಶ್ ಬಳಿ ಸ್ವಂತದ ಒಂದು ಆಂಬುಲೆನ್ಸ್ ಬಿಟ್ಟರೆ ಬೇರೇನೂ ಇರಲಿಲ್ಲ. ಸಂಸಾರ ನಡೆಸಲು ಬೇಕಾಗುವಷ್ಟು ಸಂಪಾದನೆ ಆಗುತ್ತಿದ್ದುದರಿಂದ ಬದುಕಿನ ಬಂಡಿ ಮುಂದೆ ಸಾಗುತ್ತಿತ್ತು.

ಸುರೇಶ್ ಆಂಬುಲೆನ್ಸ್ ಡ್ರೈವರ್ ಆಗಿ ಹಗಲು ರಾತ್ರಿಯೆನ್ನದೆ ದುಡಿಯುತ್ತಿದ್ದರು. ಗಂಡ–ಮನೆ–ಮಕ್ಕಳು ಎನ್ನುತ್ತ, ರಾಧಿಕಾ ಕೂಡ ಒಂದಲ್ಲ ಒಂದು ದುಡಿಮೆಯನ್ನು ಹಚ್ಚಿಕೊಂಡು ಸಂಸಾರದ ನೊಗವನ್ನು ಎಳೆಯುತ್ತಲೇ, ಪತಿಯ ಜೊತೆಗೆ ಡ್ರೈವಿಂಗ್ ಕಲಿತರು.

‘ಆಂಬುಲೆನ್ಸ್ ನಿಂತಿದ್ದಾಗ ನಿಧಾನವಾಗಿ ಅದನ್ನು ಚಲಾಯಿಸುವ ಕಲೆಯನ್ನು ಕಲಿತುಕೊಳ್ಳುವಂತೆ ಪತಿ ಒತ್ತಾಯಿಸಿದ್ದರಿಂದ ನಾನು ಡ್ರೈವಿಂಗ್ ಕಲಿತೆ. ಡ್ರೈವಿಂಗ್ ಎಂದರೆ ಒಂಚೂರೂ ಇಷ್ಟವಿರಲಿಲ್ಲ ನನಗೆ. ಎಷ್ಟೋ ಸರ್ತಿ, ಸರಿಯಾಗಿ ಗಾಡಿ ಓಡಿಸು ಎಂದು ಸುರೇಶ್ ದಬಾಯಿಸುತ್ತಿದ್ದರು...’ ಎಂದು ರಾಧಿಕಾ ನೆನಪಿಸಿಕೊಳ್ಳುತ್ತಾರೆ. ಆದರೆ, ಹಾಗೆ ಡ್ರೈವಿಂಗ್ ಕಲಿಯುವಾಗ, ಮುಂದೊಂದು ದಿನ ಅದು ತನ್ನ ಬದುಕಿನ ಆಧಾರವಾದೀತು ಎಂಬ ಕಲ್ಪನೆಯೇ ಅವರಿಗೆ ಇರಲಿಲ್ಲ. ನಂತರದ ದಿನಗಳಲ್ಲಿ ಸುರೇಶ್ ಅವರಿಗೆ ಕೆಎಸ್ಸಾರ್ಟಿಸಿಯಲ್ಲಿ ಉದ್ಯೋಗ ದೊರೆತಾಗ, ಇನ್ನು ತನ್ನ ಬದುಕು ನೆಮ್ಮದಿಯ ಸರಿ ದಾರಿಗೆ ಬಂದೇ ಬಿಟ್ಟಿತು ಎಂದು ರಾಧಿಕಾ ಖುಷಿ ಪಟ್ಟಿದ್ದರು.

ಖುಷಿಯ ಆಯುಸ್ಸು ಬಹಳ ಚಿಕ್ಕದಾಗಿತ್ತು.

ಪತಿಗೆ ಕ್ಯಾನ್ಸರ್ ಬಂದಾಗ ರಾಧಿಕಾ ಕುಸಿದುಹೋದರು. ಮಕ್ಕಳು, ಮನೆಯೆನ್ನುತ್ತ ತಕ್ಕಮಟ್ಟಿಗಿನ ನೆಮ್ಮದಿಯಲ್ಲಿ ಸಾಗುತ್ತಿದ್ದ ಸಂಸಾರವು ಕ್ಯಾನ್ಸರ್ ಎಂಬ ಬಿರುಗಾಳಿಗೆ ತತ್ತರಿಸಿತು. ಅದುವರೆಗೆ ಕೂಡಿಟ್ಟ ಹಣ, ಆಸ್ತಿಪಾಸ್ತಿಯನ್ನೆಲ್ಲ ಗಂಡನ ಆರೈಕೆಗಾಗಿ ಆಸ್ಪತ್ರೆ ಖರ್ಚಿಗೆ ಸುರಿದ ರಾಧಿಕಾ, ಗಂಡನನ್ನು ಉಳಿಸಿಕೊಳ್ಳಲು ಹೋರಾಡಿದರು. ಆದರೆ ಕಾಯಿಲೆ ಸುರೇಶ್ ಅವರನ್ನು ಬಲಿಪಡೆಯಿತು. 2002ರಲ್ಲಿ ಪತಿಯು ಅಗಲಿದಾಗ ಅವರು ಕಂಗಾಲಾಗಿದ್ದರು, ಬರಿಗೈಲಿ ನಿಂತ 28ರ ಹರೆಯದ ಮಹಿಳೆಯಾಗಿದ್ದರು. ಪುಟಾಣಿ ಮಕ್ಕಳಿಬ್ಬರು ಮಡಿಲಿನಲ್ಲಿದ್ದರು. ಬದುಕಿಗೆ ಏನಾದರೂ ಸಂಪಾದನೆ ಮಾಡಿಕೊಳ್ಳಬೇಕಲ್ಲ ಎಂದು ಯೋಚಿಸುತ್ತಿದ್ದಾಗ, ಪತಿ ಓಡಿಸುತ್ತಿದ್ದ ಆಂಬುಲೆನ್ಸ್‌ನ ಚಾಲಕಿ ತಾನೇ ಯಾಕೆ ಆಗಬಾರದು ಎಂಬ ಆಲೋಚನೆ ಮೂಡಿತು.

ಬದುಕನ್ನು ಮತ್ತೊಮ್ಮೆ ಮೊದಲಿನಿಂದ ಕಟ್ಟಿಕೊಳ್ಳುವ ಸವಾಲನ್ನು ರಾಧಿಕಾ ಏಕಾಂಗಿಯಾಗಿ ಎದುರಿಸಿದರು. ಆಂಬುಲೆನ್ಸ್ ಚಾಲನೆ ಎಂದರೆ ಇತರ ವಾಹನ ಚಲಾಯಿಸಿದಂತಲ್ಲ. ಕಿವಿಗೆ ಅಪ್ಪಳಿಸುವ ಆಕ್ರಂದನವನ್ನು ಆಲಿಸಿಕೊಂಡೇ ವಾಹನ ಚಲಾಯಿಸಬೇಕು. ಅಗತ್ಯವೆನಿಸಿದಾಗ, ಸೈರನ್ ಹೊಡೆದುಕೊಂಡು, ಟ್ರಾಫಿಕ್‌ನಲ್ಲಿ ವಾಹನ ಚಲಾಯಿಸಬೇಕು. ಹೀಗೆ ವಿಪರೀತ ಪರಿಸ್ಥಿತಿಗಳಲ್ಲಿ ಮನಸ್ಸನ್ನು ಗಟ್ಟಿಮಾಡಿಕೊಂಡು, ಜೀವವುಳಿಸಲು ಓಡುವ ಓಟ ಅದು. ಮಧ್ಯರಾತ್ರಿಯಲ್ಲಿ ಫೋನ್ ರಿಂಗಾದರೆ, ಕತ್ತಲಿದೆಯೇ, ಬೆಳಕಿದೆಯೇ, ಭಯವಾಗುತ್ತಿದೆಯೇ ಎಂಬುದನ್ನು ಲೆಕ್ಕಿಸದೇ ರಾಧಿಕಾ ಆಂಬುಲೆನ್ಸ್ ಏರಿಬಿಡುತ್ತಿದ್ದರು. ಆಗ ಪುಟ್ಟ ಮಕ್ಕಳಾಗಿದ್ದ ಭಾರ್ಗವಿ ಮತ್ತು ಭೂಮಿಕಾ ಅಜ್ಜಿಯ ಜೊತೆಗೆ ಇರುತ್ತಿದ್ದರು. ‘ನನ್ನ ಏಕಾಂಗಿ ಪಯಣದಲ್ಲಿ ಕೈ ಹಿಡಿದು ನಡೆಸಿದ್ದು ಅಮ್ಮ ದೇವಮ್ಮ’ ಎಂದು ರಾಧಿಕಾ ನೆನಪಿಸಿಕೊಳ್ಳುತ್ತಾರೆ.

ಹಾಸನದಲ್ಲಿ ನರ್ಸಿಂಗ್ ಶಿಕ್ಷಣ ಪಡೆದಿದ್ದ ರಾಧಿಕಾ ಪ್ರಥಮ ಚಿಕಿತ್ಸೆಯನ್ನು ಬಲ್ಲವರಾಗಿದ್ದರು. ಹಾಗಾಗಿ ಅಪಘಾತದ ಜಾಗದಲ್ಲಿ ಗಾಯಾಳುಗಳಿಗೆ ಪ್ರಥಮ ಚಿಕಿತ್ಸೆಯನ್ನೂ ಅವರು ಮಾಡಿದ್ದುಂಟು. ಹೀಗೆ ಶುರುವಾದ ಮತ್ತೊಂದು ಓಟದಲ್ಲಿ ರಾಧಿಕಾ ಪ್ರಸಿದ್ಧರಾದರು. ಹದಿನೈದು ಆಂಬುಲೆನ್ಸ್ ಮತ್ತು ಎರಡು ಬಸ್ಸುಗಳ ಮಾಲೀಕಳಾಗಿ ಗುರುತಿಸಿಕೊಂಡರು. ಯಶಸ್ಸಿನ ಉತ್ತುಂಗವನ್ನು ಏರುವುದಕ್ಕೆ ಅವರು ಹಾಕಿದ ಶ್ರಮ ಅಷ್ಟಿಷ್ಟಲ್ಲ. ಶವಗಳನ್ನು ತಾವೇ ಎತ್ತಿ ಗಾಡಿಗೆ ಹಾಕುವ ಕೆಲಸವಾಗಲೀ, ಸಂಬಂಧಿಕರನ್ನು ಸಂತೈಸುವುದಾಗಲೀ, ಗಲಾಟೆ ದೊಂಬಿಗಳ ನಡುವೆಯೂ ನಾಜೂಕಾಗಿ ವಾಹನ ಚಲಾಯಿಸುವುದಾಗಲೀ, ಅಲ್ಲಲ್ಲಿ ಗಾಡಿಯ ರಿಪೇರಿಯಾಗಲೀ – ಯಾವುದೇ ಕೆಲಸವನ್ನು ಸೈ ಎನ್ನುತ್ತ ನಿಭಾಯಿಸಿದ ಗಟ್ಟಿಗಿತ್ತಿ ಆಕೆ.

ತನ್ನಂತೆಯೇ ಕಷ್ಟದಲ್ಲಿರುವ ಮಹಿಳೆಯರಿಗೆ ಸಹಾಯ ಮಾಡಿದರು. ಒಮ್ಮೆ, ಮಂಗಳೂರಿನ ಆಸ್ಪತ್ರೆಯಲ್ಲಿ ಮಹಿಳೆಯೊಬ್ಬರ ಮಗು ತೀರಿಕೊಂಡಾಗ, ಶವವನ್ನು ತನ್ನೂರಿಗೆ ಕೊಂಡೊಯ್ಯಲು ಅವರ ಬಳಿ ಹಣವಿರಲಿಲ್ಲ. ಆಗ ಶವವನ್ನು ಬಳ್ಳಾರಿಗೆ ಸಾಗಿಸುವ ಕೆಲಸ ರಾಧಿಕಾ ಅವರ ಪಾಲಿಗೆ ದೊರೆಯಿತು. ಬಡ ಮಹಿಳೆಯು ದುಃಖಿಸುತ್ತ ಆಂಬುಲೆನ್ಸ್‌ನಲ್ಲಿ ಕುಳಿತಿದ್ದಳು. ಆಕೆಯ ಊರು ತಲುಪುವಷ್ಟರಲ್ಲಿ ಅಲ್ಲಿ ಜನ ಜಮಾಯಿಸಿದ್ದರು. ಮಗುವಿನ ಸಂಸ್ಕಾರಕ್ಕೆ

